International Journal of Kannada Research
www.kannadajournal.com

ISSN: 2454–5813
IJKR 2020; 6(4): 01-04
© 2020 IJKR
www.kannadajournal.com
Received: 01-08-2020
Accepted: 03-09-2020

**ಡಾ.ಎಂ.ಕೆ. ದೇವಪ**
ಪ್ರಾಂಶುಪಾಲರು ಹಾಗೂ ಸಹಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರೇಹಳ್ಳಿ, ಬೇಲೂರು, ತಾಲ್ಲೂಕು. ಹಾಸನ ಜಿಲ್ಲೆ.

Corresponding Author:
**ಡಾ.ಎಂ.ಕೆ. ದೇವಪ**
ಪ್ರಾಂಶುಪಾಲರು ಹಾಗೂ ಸಹಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರೇಹಳ್ಳಿ, ಬೇಲೂರು, ತಾಲ್ಲೂಕು. ಹಾಸನ ಜಿಲ್ಲೆ.

# ದೊಂಬಿದಾಸ ಜನಾಂಗದವರ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕು

**ಡಾ.ಎಂ.ಕೆ. ದೇವಪ್ಪ**

## ದೊಂಬಿದಾಸ ಜನಾಂಗದ ಹಿನ್ನಲೆ

ಗಾಯನ ಕಲೆಯನ್ನು ತಮ್ಮ ಬದುಕಿನ ಜೀವಾಳವನ್ನಾಗಿಸಿಕೊಂಡು ಹಳ್ಳಿಗರ ಮನಸ್ಸಿಗೆ ಮುದ ನೀಡುವ ಹಾಡುಗಳನ್ನು ಹಾಡುತ್ತ ಒಂದು ಕಡೆ ನೆಲೆಯೊರದೆ ಕರ್ನಾಟಕದ ವಿವಿಧ ಭಾಗಗಳಲ್ಲಿ ಹರಿದು ಹಂಚಿ ಹೋಗಿರುವ ಸಮುದಾಯವೆ ದೊಂಬಿದಾಸರು. ಇವರು ಅರೆ ಅಲೆಮಾರಿ ಜನಾಂಗ, ತಮ್ಮ ಬಲಗೈಯಲ್ಲಿ ಏಕತಾರಿ ಯನ್ನು ನುಡಿಸುತ್ತ, ಕಂಕುಳಿಗೆ ಜೋಳಿಗೆ ನೇತು ಹಾಕಿಕೊಂಡು, ಹೊಟ್ಟೆಪಾಡಿಗಾಗಿ ಅವರವರ ಮನೆಯಲ್ಲಿ ಭಿಕ್ಷೆ ಬೇಡುತ್ತ ಹೊಟ್ಟೆ ಹೊರೆದವರು ಇವರು. ಜನಪ್ರಿಯ ವೃತ್ತಿಗಾಯಕರು ಮಾತ್ರವಲ್ಲದೆ, ಹಳ್ಳಿಹಳ್ಳಿಗಳಲ್ಲಿ ಸಂಚರಿಸುತ್ತ, ಅಲ್ಲಲ್ಲಿ ನಾಟಕವನ್ನು ಆಡುತ್ತ, ಯಕ್ಷಗಾನವನ್ನು ಕೂಡ ಪ್ರದರ್ಶಿಸುತ್ತ, ಜನರ ಹೃದಯದಲ್ಲಿ ಅಪರೂಪದ ಸ್ಥಾನವನ್ನು ಇವರು ಪಡೆದಿದ್ದಾರೆ. ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ವಿವಿಧ ಭಾಗಗಳಲ್ಲಿ ಚದುರಿ ಹೊಗಿರುವ ಇವರು, ಉತ್ತರ ಕರ್ನಾಟಕದಲ್ಲಿ ದೊಂಬಿದಾಸ ಎಂಬ ಹೆಸರಿನ ಮೂಲಕ ತಮ್ಮನ್ನು ಗುರುತಿಸಿಕೊಂಡಿದ್ದಾರೆ.

ಮೈಸೂರು ಟ್ರೈಬ್ಸ್ ಅಂಡ್ ಕ್ಯಾಸ್ಟಸ್ (ಖುಜ ಒಥಿಂಡಿಜ ಖಿಡಿಉಭಛ ಚಿಟಿಜ ಅಛಿಣಜ) ಈ ಗ್ರಂಥದಲ್ಲಿ ಬಿಕ್ಷಾಟನೆಯಿಂದ ಜೀವಿಸುವ ಈ ಜನಾಂಗವನ್ನು ಬಲಿಜ ಜನಾಂಗದ ಒಂದು ಉಪ ಜನಾಂಗವನ್ನಾಗಿ ಗುರುತಿಸಲಾಗಿದ್ದು ದಂಡಿದಾಸರು ಎಂದು ಕೂಡ ಇವರನ್ನು ಕರೆಯುವ ವಾಡಿಕೆಯಿದೆ. ಜೋಗಿ, ಹೆಳವ, ತೆಲುಗು ಜಂಗಮರಂತೆ, ದೊಂಬಿದಾಸರು ಹಾಡುಗಾರಿಕೆಯನ್ನು ತಮ್ಮ ಮುಖ್ಯ ವೃತ್ತಿಯನ್ನಾಗಿಸಿಕೊಂಡು ಬಂದ ಜನಾಂಗ ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ ಎಂದು ಉಲ್ಲೇಖಿಸಲಾಗಿದೆ.

ದೊಂಬಿದಾಸ ಸಮುದಾಯವನ್ನು ಕುರಿತಂತೆ ಬ.ಬಿ.ಮಹೀಶವಾಡಿಯವರು. ದೊಂಬಿದಾಸರು ಮುಖ್ಯವಾಗಿ ವೃತ್ತಿಗಾಯಕರು. ದಮ್ಮಡಿ ಬಾರಿಸುತ್ತ ಏಕತಾರಿ ಮಿಡಿಯುತ್ತ, ಅಭಿಮನ್ಯುವಿನ ಕತೆ, ರಾಮಲಕ್ಷ್ಮಣ, ಸಿಂದೂರಲಕ್ಷ್ಮಣ, ಕಟ್ಟೀಚನ್ನ, ಪವುಣಂಚಯ, ಮೊದಲಾದ ಕನ್ನಡ ನಾಡಿನ ಸಾಮಾನ್ಯ ಜನತೆಯ ಮುಂದೆ ಅಸಾಮಾನ್ಯ ಸಾಹಸಮಾಡಿ ಮೆರೆದ ಬಂಟರ ಹಾಡುಗಳನ್ನು ಹೇಳುತ್ತಾರೆ. ಕಿತ್ತೂರ ಚೆನ್ನಮ್ಮ ಮುಂಡರಗಿ ಭೀಮರಾಯ, ನರಗುಂದಬಂಡಾಯ, ಹಲಗಲಿ ಜಡಗಾಬಾಲಾರ ಕಥೆಗಳನ್ನು ಸುಂದರವಾಗಿ ವೀರರಸ ಉಕ್ಕುವಂತೆ, ಮೈರೋಮಾಂಚನಗೊಳ್ಳುವಂತೆ ಹಾಡಿ ತೋರಿಸುತ್ತಾರೆ, ಎಂದು ಹೇಳಿರುವ ಅಭಿಪ್ರಾಯ ನಿಜಕ್ಕೂ ಸ್ತುತ್ಯಾರ್ಹವೆ ಎನ್ನಬಹುದಾಗಿದೆ.

ದೊಂಬಿದಾಸರು ಯಾವ ಕಾಲದಲ್ಲಿ ಕರ್ನಾಟಕವನ್ನು ಪ್ರವೇಶಿಸಿರಬಹುದು ಎಂಬುದಕ್ಕೆ ನಿಖರವಾದ ಆಧಾರವಿಲ್ಲ. ಅವರು ಕನ್ನಡ ಪ್ರದೇಶಗಳಲ್ಲಿಯೇ ಹುಟ್ಟಿ ಬೆಳೆದ ಜನಾಂಗವಾಗಿರಬಹುದೆ ಎಂಬ ಕನ್ನಡ ಜಾನಪದ ವಿದ್ವಾಂಸರಾದ ಜೀಶಂಪ (ದೊಂಬಿದಾಸ ಲಾವಣಿಗಳು: (ಸಂ) ಜೀಶಂಪ ಸಾಹಿತ್ಯ ಮೈಸೂರು, ಪ್ರಥಮ ಮುದ್ರಣ 1974, ಪ್ರ.ಸಂ.) ಅವರು ವ್ಯಕ್ತಪಡಿಸುವ ಮೂಲಕ, ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಒಟ್ಟಿನಲ್ಲಿ ದೊಂಬಿದಾಸ ಸಮುದಾಯವು, ತನ್ನದೇ ಆದ ಸಾಮುದಾಯಿಕ ಹಿನ್ನಲೆ, ಪರಿಚಯ ಮತ್ತು ಸಾಂಸ್ಕೃತಿಕ ನೆಲೆಗಟ್ಟನ್ನು ಕಟ್ಟಿಕೊಳ್ಳುವ ಮೂಲಕ, ಕನ್ನಡ ನಾಡಿನಲ್ಲಿ ಮಹತ್ವದ ಸ್ಥಾನಮಾನವನ್ನು ಪಡೆದಿದ್ದಾರೆ.

## ದೊಂಬಿದಾಸರು ಮುಖ್ಯವಾಗಿ ನೆಲೆಸಿರುವ ಪ್ರದೇಶಗಳು

ದೊಂಬಿದಾಸ ಸಮುದಾಯವು, ಕರ್ನಾಟಕದ ವಿವಿಧ ಭಾಗಗಳಲ್ಲಿ ಹರಿದು ಹಂಚಿಹೋಗುವ ಮೂಲಕ ನೆಲೆಯೂರಿದ್ದಾರೆ. ವಿವಿಧ ಭಾಗಗಳಲ್ಲಿ ಹರಿದು ಹಂಚಿ ಹೋಗುವ ಮೂಲಕ ನೆಲೆಯೂರಿದ್ದಾರೆ. ಇವರು ಬೆಂಗಳೂರು ನಿರ್ಮಿಸಿದ ಮಾಗಡಿ ಕೆಂಪೇಗೌಡ ನ ಕಾವ್ಯವನ್ನು ತಮ್ಮ ಸಿರಿಕಂಠದಲ್ಲಿ ಹಾಡುವ ಮೂಲಕ ಜನಪ್ರಿಯತೆ ಪಡೆದಿದ್ದಾರೆ. ಯಲಹಂಕ ನಾಡಿನಲ್ಲಿ ನೆಲೆಸಿ, ಅಲ್ಲಿಯೆ ತಮ್ಮ ಜೀವನ ವೃತ್ತಿಯನ್ನು ಆರಂಭಿಸುತ್ತಲೆ, ವಿವಿಧ ಪ್ರದೇಶಗಳಲ್ಲಿ ಚದುರಿ ಹೋಗಿದ್ದಾರೆ.

ವಿಶೇಷವಾಗಿ ಮಾಗಡಿ ಪತನವಾದ ಬಳಿಕ ತಮ್ಮ ಬದುಕಿನ ಬಂಡಿಯನ್ನು ಕಂಡುಕೊಳ್ಳುವ ಸಲುವಾಗಿ, ಕನ್ನಡದಲ್ಲಿ ಲಾವಣಿ ಗಳನ್ನು ಹಾಡುತ್ತ ಊರೂರುರನ್ನು ಸುತ್ತುತ್ತ ಜೀವನಕ್ಕೆ ಒಂದು ಕಲಾ ಮಾಧ್ಯಮವನ್ನು ಕಂಡುಕೊಂಡಿರಬಹುದೆಂದು ಊಹಿಸಬಹುದಾಗಿದೆ. ಆ ಮೂಲಕ ಕಥೆ ಕಟ್ಟಿದ್ದಾರೆ. ಲಾವಣಿಗಳನ್ನು ಹಾಡುತ್ತಲೆ, ನಾಟಕಗಳನ್ನು ಆಡಿಸುತ್ತಲೆ, ವಿಶೇಷವಾಗಿ ತಾವೂ ಸಹ ಆಡಿದ್ದಾರೆ. ಹೀಗಾಗಿ ಇವರು ಕರ್ನಾಟಕದ ಒಂದು ಭಾಗದಲ್ಲಿ ನೆಲೆಸಿದವರಲ್ಲ, ಮುಖ್ಯವಾಗಿ ಇವರು ತುಮಕೂರು ಜಿಲ್ಲೆಯಲ್ಲಿ ಕಂಡುಬರುತ್ತಾರೆ. ಹಾಗೇಯೇ, ಮೈಸೂರು, ಮಂಡ್ಯ, ತುಮಕೂರು, ಹಾಸನ, ಬೆಂಗಳೂರು, ಕೋಲಾರ, ಚಿತ್ರದುರ್ಗ ಹಾಗೂ ಇತರ ಕರ್ನಾಟಕದ ವಿವಿಧಕಡೆಗಳಲ್ಲಿ ಚದುರಿ ಹೋಗಿರುವುದನ್ನು ಗಮನಿಸಬಹುದಾಗಿದೆ. ಮಂಡ್ಯ ನಗರಕ್ಕೆ ಹತ್ತಿರವಿರುವ ಹೊಸಹಳ್ಳಿ ಮಠದಲ್ಲಿ ತತ್ವಪದಗಳನ್ನು ಹಾಡುವ ದೊಂಬಿದಾಸರು ಕಂಡುಬರುತ್ತಾರೆ ಹಾಸನ ಜಿಲ್ಲೆಯ ಜಾವಗಲ್‌ನ ಆಸುಪಾಸಿನ ಕೆಲವು ಪ್ರದೇಶಗಳಲ್ಲಿ ಈ ಸಮುದಾಯದ ಜನರು ವಾಸಿಸುತ್ತಿರುವುದನ್ನು ಗಮನಿಸಬಹುದಾಗಿದೆ.

ದೊಂಬಿದಾಸ ಸಮುದಾಯದವರು ವಿಶೇಷವಾಗಿ ಮೈಸೂರು ಜಿಲ್ಲೆಯ ವಿವಿಧ ಭಾಗಗಳಲ್ಲಿ ನೆಲೆಸಿದ್ದಾರ. ಮುಖ್ಯವಾಗಿ ಹುಣಸೂರು ತಾಲ್ಲೂಕಿನ ಕುಪ್ಪೆ ಮತ್ತು ಶ್ಯಾನುಭೋಗನಹಳ್ಳಿ ಮತ್ತು ಕೆ.ಆರ್ ನಗರ ತಾಲ್ಲೂಕಿನ ಮಳಲಿ ಮುದ್ದನಹಳ್ಳಿ ಹರಂಬಳ್ಳಿಕೊಪ್ಪಲು ಈ ಗ್ರಾಮಗಳಲ್ಲಿ ಕೆಲವು ಕುಟುಂಬಗಳು ವಸಿಸುತ್ತಿವೆ. ಅಲ್ಲದ ಮೈಸೂರಿಗೆ ಸ್ವಲ್ಪ ಹತ್ತಿರವಿರುವ ಆನಂದೂರು ಕೊಪ್ಪಲು ಎಂದು ಮೊದಲು ಕರೆಯಿಸಿಕೊಂಡು ಇತ್ತೀಚೆಗೆ ಯಾಚೇಗೌಡನಹಳ್ಳಿ ಎಂಬ ಹೆಸರನ್ನು ಬದಲಾಯಿಸಿಕೊಂಡಿರುವ ಈ ಗ್ರಾಮದಲ್ಲಿಯೂ ಕೂಡ ದೊಂಬಿದಾಸ ಜನಾಂಗವು ವಾಸಿಸುತ್ತಿರುವುದನ್ನು ಕಾಣಬಹುದಾಗಿದೆ.

ಟಿ.ನರಸೀಪುರ ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕಿನ ಗ್ರಾಮವೇ ಕರಹಟ್ಟಿ. ಇಲ್ಲಿ ಒಟ್ಟು 3 ಕುಟುಂಬಗಳಿವೆ 15 ಜನರು ಈ ಊರಿನಲ್ಲಿದ್ದಾರೆ ಎಲ್ಲರೂ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದು ಜಮೀನು ಹೊಂದಿರುವವರಿದ್ದಾರೆ. ಅಲ್ಲದೆ ಮೈಸೂರು ನಗರಕ್ಕೆ ಹೊಂದಿಕೊಂಡಂತಿರುವ ಏಕಲವ್ಯ ನಗರದಲ್ಲಿ ದೊಂಬಿದಾಸ ಸಮುದಾಯದ ಕೆಲವು ಕುಟುಂಬಗಳಿವೆ. ಅರ ಅಲೆಮಾರಿ ಜನಾಂಗವಾದ ಈ ಸಮುದಾಯವು ಈ ಪ್ರದೇಶದಲ್ಲಿ ನೆಲೆ ಕಂಡುಕೊಳ್ಳಲು ಸರ್ಕಾರದ ಸೌಲಭ್ಯ ಮೂಲಭೂತ ಅಗತ್ಯತೆಗಾಗಿ ನಿರಂತರವಾಗಿ ಹೋರಾಡುತ್ತಿದೆ.

ಒಟ್ಟಿನಲ್ಲಿ ದೊಂಬಿದಾಸ ಸಮುದಾಯವು ಮೇಲೆ ತಿಳಿಸಿರುವ ಹಾಗೆ ಒಂದು ಅಲೆಮಾರಿ ಸಮುದಾಯ ಇಂತಿಷ್ಟೇ ಕುಟುಂಬಗಳೂ ಇಂತಿಂತಹ ಊರಿನಲ್ಲಿ ನಲಸಿದೆ ಎಂದು ತಿಳಿಸಲು ಕರ್ನಾಟಕದ ರಾಜ್ಯಾದ್ಯಂತ ಗಂಭೀರ ಮತ್ತು ಆಸಕ್ತೀಯ ಕ್ಷೇತ್ರ ಕಾರ್ಯ ನಡೆಯಬೇಕು. ಜಾನಪದ ಸಂಶೋಧಕರು ಸಂಶೋಧನಾ ಅಭ್ಯರ್ಥಿಗಳು ಹಾಗೂ ಸರ್ಕಾರ ಈ ಜನಾಂಗದ ಕಡೆಗೆ ವಿಶೇಷ ಆಸಕ್ತಿ ತೋರಿಸಿದರೆ ಮಾತ್ರ ಅವರ ವಾಸ್ತವಿಕ ದೈನಂದಿನ ಬದುಕು ಮತ್ತು ಬವಣೆಯನ್ನು ಗುರುತಿಸಬಹುದು. ಅಲ್ಲಲ್ಲೆ ಚದುರಿ ಹೋಗಿರುವ ಈ ಕುಟುಂಬಗಳು ಒಂದು ಕಡೆಗೆ ಗಟ್ಟಿಯಾಗಿ ತಳವೂರಲು ಸಾಧ್ಯವಾಗುತ್ತಿಲ್ಲ. ಹಾಗೂ ಇದು ಅಷ್ಟು ಸಾಧ್ಯವೂ ಅಲ್ಲ ಇವರ ಬಗ್ಗೆ ಸರ್ಕಾರದ ಗಮನ ನಿಜವಾದ ಕಾಳಜಿ ಮತ್ತು ಹೊಣೆಗಾರಿಕೆಯನ್ನಿಟ್ಟುಕೊಂಡು ಈ ಜನಾಂಗದ ಭದ್ರತೆಗೆ ಪ್ರತ್ಯೇಕ ಕಾರ್ಯಕ್ರಮವನ್ನು ಹಮ್ಮಿಕೊಂಡರೆ ಮಾತ್ರ ಅವರ ಯಶಸ್ಸು ನಿರೀಕ್ಷಿಸಬಹುದು. ದೊಂಬಿದಾಸ ಜನಾಂಗದ ಜೀವನ ಪದ್ಧತಿ ಮತ್ತು ಇವರ ಧಾರ್ಮಿಕ ನಂಬಿಕೆ ಕಸುಬು. ದೊಂಬಿದಾಸ ಜನಾಂಗವು ಕಲೆ, ರಂಗಭೂಮಿ ಮತ್ತು ಯಕ್ಷಗಾನ ಪ್ರದರ್ಶನಕ್ಕೆ ತುಂಬ ಹೆಸರಾದವರು ಇವರನ್ನು ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಹೆಣ್ಣುವೇಷದವರು ಎಂದೂ ಸಹ ಕರೆಯುತ್ತಾರೆ.

ಭಿಕ್ಷಾಟನೆ ಮಾಡುವ ಮೂಲಕ ಒಂದು ಊರಿನಲ್ಲಿ ತಳವೂರದೆ, ಏಕತಾರಿಯನ್ನು ಬಲಗೈಲಿ ಹಿಡಿದು ಚಿಟಿಗಿಯನ್ನು ಎಡಗೈಲಿ ಹಿಡಿದು ನುಡಿಸುವುದು ಈ ಸಮುದಾಯದವರು ತಲತಲಾಂತರದಿಂದ ರೂಪಿಸಿಕೊಂಡು ಬಂದಿರುವ ಕಸುಬಾಗಿದೆ. ಭಿಕ್ಷಾಟನೆ ಮಾಡುವುದೇ ಈ ಜನಾಂಗದ ಮೂಲ ಕಸುಬಾಗಿದೆ. ಆದರೆ ಇವರು ಬೆಳೆ ಬಂದಾಗ ರೈತಾಪಿವರ್ಗ ಎಲ್ಲಿ ಹೆಚ್ಚಿನ ಬೆಳೆಯನ್ನು ಬೆಳೆದು ಜೀವನ ಮಾಡುತ್ತಿರುತ್ತಾರೋ ಈ ಕಡೆಗೆ ಮುಖ ಮಾಡುತ್ತಾರೆ. ಮೊದಮೊದಲು ಸಿಕ್ಕಸಿಕ್ಕ ಕಡೆ ಮನೆ ಮಠ ಮಂದಿರ ಗುಡಿಗಳಲ್ಲಿ ತಂಗುತ್ತ ಜೀವನ ಸಾಗಿಸಿರುವ ನಿದರ್ಶನವು ಸಹ ಇದೆ.

ಗಾಯನ, ನಾಟಕ ಹಾಗೂ ಭಿಕ್ಷಾಟನೆ ಈ ಮೂರು ಮುಖ್ಯವಾಗಿ ಇವರ ಜೀವನ ನಿರ್ವಹಣೆಯ ನಿಜವಾದ ಕಸುಬಾಗಿತ್ತು. ಕಂಕುಳಿಗೆ ಜೋಳಿಗೆ ನೇತುಹಾಕಿಕೊಂಡು ಇಬ್ಬರು ಮತ್ತು ಮೂವರು ಭಿಕ್ಷಾಟನೆ ಮಾಡಲು ಹೋಗುವುದು ಇವರ ವಾಡಿಕೆಯಾಗಿತ್ತು. ಆದರೆ ಹೆಂಗಸರಾಗಿರಬಹುದು, ಗಂಡಸಾಗಿರಬಹುದು ಕುಂತು ಉಣ್ಣುವ ಜಾಯಮಾನದವರು ಈ ಸಮುದಾಯದಲ್ಲಿ ತುಂಬ ವಿರಳ. ಹೆಂಗಸರು ಊರೂರಿಗೆ ಬಾಚಾಣಿಕೆ, ಮಣಿಸರ, ಸ್ನೋ ಪೌಡರ್, ಬಳೆ, ದಾರ, ಸೂಜಿ, ದಬ್ಬಳ, ಪಿನ್ನು, ಟೇಪು ಇವೆ ಮೊದಲಾದ ವೃತ್ತಿಯಲ್ಲಿ ತೊಡಗಿ ಊರೂರು ಸುತ್ತಿ ವ್ಯಾಪಾರ ಮಾಡಿ ಹೊಟ್ಟೆಹೊರೆದಿದ್ದಾರೆ. ಹೆಂಗಸರದು ಈ ರೀತಿಯ ಕಸುಬಾದರೆ ಗಂಡಸರು ಕೂಡ ತಮ್ಮ ದೈನಂದಿನ ಕಸುಬಿನಲ್ಲಿ ತೊಡಗಿರುವುದಕ್ಕೆ ನಿದರ್ಶನವಾಗಿ ಇವರುಗಳು ಕೋಲೆ ಬಸವನ ಆಡಿಸುವುದು ಛತ್ರಿ ರಿಪೇರಿ ಮಾಡುವುದು ತಬಲ ಪಿಟೀಲು ಹಾರ್ ಮೋನಿಯಂ ಹಳೆ ಬೀಗ ಬೀಗದಕೈ ಬಟ್ಟೆ ವ್ಯಾಪಾರ ಇವೆ ಮುಂತಾದ ಸಣ್ಣಪುಟ್ಟ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡು ಬದುಕು ಕಳೆಯುತ್ತಾರೆ.

ಸುಗ್ಗಿಯ ಸಮಯದಲ್ಲಿ ಊರಿಂದ ಊರಿಗೆ ನಾಟಕಗಳನ್ನು ಆಡುತ್ತ ಆಡಿಸುತ್ತಾ ದವಸ ಧಾನ್ಯಗಳನ್ನು ಸಂಪಾದಿಸುವ ಸಲುವಾಗಿ ಹೆಂಗಸರನ್ನು ತಮ್ಮ ಜೊತೆಗೆ ಕರೆದುಕೊಂಡು ಹೋಗುತ್ತಾರೆ. ಆದರೆ ಅನಿವಾರ್ಯ ಸಂದರ್ಭದಲ್ಲಿ ಹೆಂಗಸರು ಮತ್ತು ಮಕ್ಕಳನ್ನು ಮಾತ್ರ ತಮ್ಮೊಡನೆ ಕರೆದುಕೊಂಡು ಹೋಗುತ್ತಾರೆ. ಹೀಗಾಗಿ ಅಗತ್ಯಕ್ಕೆನುಸಾರ ಮತ್ತು ಪರಿಸ್ಥಿತಿಗನುಸಾರವಾಗಿ ಹೊಂದಿಕೊಂಡು ಬದುಕು ನಿಭಾಯಿಸುವ ಕಲೆಗಾರಿಕೆ ಇವರಿಗಿದೆ. ಅದರಲ್ಲಿಯೂ ಗಂಡಸರಂತೂ ಊರಿನಲ್ಲಿ ಇರುವುದು ತುಂಬ ಅಪರೂಪ. ದೊಂಬಿದಾಸ ಜನಾಂಗದ ಹಾಡುಗಾರರು ಏಕತಾರಿಯನ್ನು ಬಲಗೈಲಿ ಹಿಡಿದು ಚಿಟಿಗೆಯನ್ನು ಎಡಗೈಲಿ ಹಿಡಿದು ನುಡಿಸುತ್ತಿದ್ದರೆ, ಇಬ್ಬರು ಉಡದ ಚರ್ಮದಿಂದ ಹದವಾಗಿ ಮಾಡಿದ್ದ ದಮ್ಮಡಿಯನ್ನು ಮತ್ತೊಬ್ಬ ಕಂಚಿನ ಬಟ್ಟು ತಾಳಗಳನ್ನು ಕುಟ್ಟುತ್ತ ಸೊಲ್ಲು ಕೊಡುತ್ತಾರೆ. ಗಂಗೇಗೌರಿ ಜಗಳ, ಹುಟ್ಟಿದಳೆ ಗೌರಮ್ಮ, ಕೃಷ್ಣಕೊರವಂಜಿ, ಬಂಜೆಹೊನ್ನಮ್ಮ, ಬಾಲಾನಾಗಮ್ಮ, ಅತ್ತೆ-ಸೊಸೆ, ಅಣ್ಣ-ತಂಗಿ, ಇನ್ನೂ ಮುಂತಾದ ಕಾವ್ಯಗಳನ್ನು ಹಾಡಿ ರಂಜಿಸುತ್ತಾರೆ. ಅಷ್ಟೇ ಅಲ್ಲದೆ ರಾಮಾಯಣ ಮಹಾಭಾರತ ಪುರಾಣ ಪುಣ್ಯಕಥೆಗಳು ಐತಿಹಾಸಿಕ ಪೌರಾಣಿಕ ಜನಪದ ಮಹಾಕಾವ್ಯ ಮೊದಲಾದವನ್ನು ಹಾಡುತ್ತಲೆ ಜನರ ಹೃದಯಕ್ಕೆ ಮುದ ನೀಡುತ್ತಾರೆ. ಜೊತೆಗೆ ರಾಜಾ ಸತ್ಯವ್ರತ, ರಾಜಾ ವಿಕ್ರಮ, ಶ್ರೀ ಕೃಷ್ಣ ಪಾರಿಜಾತ, ಶ್ರೀ ಕೃಷ್ಣಲೀಲೆ, ಸತ್ಯಹರಿಶ್ಚಂದ್ರ, ಭಕ್ತಪ್ರಹ್ಲಾದ, ಪ್ರೇಮ ಸತ್ಯಭೋಜ, ನಳಚರಿತ್ರೆ ಮಾರ್ಕಂಡೇಯ, ನಾಟಕಗಳಲ್ಲಿ ಅಭಿನಯಿಸಿ ಜನರಿಗೆ ಮನರಂಜನೆ ನೀಡುತ್ತಾರೆ. ವೃತ್ತಿಗಾಯಕರು ನಾಟಕಕಾರರು ಹರಿಕತೆ ಮಾಡುವುದರಲ್ಲಿ ಸಹ ಜನ ಮೆಚ್ಚುಗೆ ಪಡೆದಿದ್ದಾರೆ.

ದೊಂಬಿದಾಸ ಎಂದು ತಮ್ಮ ಸಮುದಾಯವನ್ನು ಸಾರ್ವಜನಿಕವಾಗಿ ಗುರುತಿಸಿಕೊಳ್ಳಲು ಇವರು ಹಿಂಜರಿಯುತ್ತಾರೆ. ಬದಲಾಗಿ ತೆಲಗು ಜಂಗಮರು ಅಥವಾ ತೆಲಗು ಬಣಜಿಗರು ಎಂದು ತಾವು ಗುರುತಿಸಿಕೊಳ್ಳುವ ಮೂಲಕ ಬದುಕುತ್ತಿರುವ ಇವರು ತಮ್ಮ ಆರಾಧ್ಯದೈವ ವೈಷ್ಣವ ಭಕ್ತಸಮುದಾಯಕ್ಕೆ ಸೇರಿರುವ ವ್ಯಕ್ತಿಗಳ ಉಪಯೋಗಕ್ಕಾಗಿ ದೇವಾರಾಧನೆ ಮಾಡುತ್ತಾರೆ. ಮತ್ತು ನರ್ತಿಸುತ್ತಾರೆ ಕುಟುಂಬದ ಹಿರಿಯ ಮಗ ಈ ವೃತ್ತಿಯನ್ನು ಮಾಡುತ್ತಾನೆ. ಶನಿವಾರ ಇವರಿಗೆ ಶುಭದಿನ. ಸೋಮವಾರ ಇತರೆ ಜನಾಂಗದವರ ಹಾಗೆ ಎತ್ತುಗಳನ್ನು ಹೊಲವನ್ನು ಉಳುಮೆ ಮಾಡಲು ಕಟ್ಟುವುದಿಲ್ಲ ಮುಂಗಾರು ಮಳೆ ಯೊಯ್ದ ನಂತರ ಹೊನ್ನಾರು ಇವರು ಕಟ್ಟುತ್ತಾರೆ. ಈ ಸಂದರ್ಭದಲ್ಲಿ ಮನೆಯಲ್ಲಿ ಏನಾದರೊಂದು ಮಂಗಳಕಾರ್ಯ ನಡೆಯಬೇಕು ಎಂಬ ನಂಬಿಕೆಯಿಂದ ಹೊಸ ಮನೆ ಕಟ್ಟುವುದು ಹೊಸ

ಬಾವಿ ತೋಡಿಸುವುದು ಇತ್ಯಾದಿ ಹೊಸ ಬಾವಿಗಳನ್ನು ತೊಡಿಸಿದರಂತೂ ಅಲ್ಲಿಂದ ಮೊದಲು ನೀರು ತಂದು ಗಂಗೆಯನ್ನು ಪೂಜಿಸುತ್ತಾರೆ. ಕೃಷಿಯಲ್ಲಿ ಬೆಳೆಗಳ ಬೀಜವನ್ನು ಬಿತ್ತುವುದಂತೂ ಕೆಲವು ಮಳೆ ನಕ್ಷತ್ರಗಳ ಆಧಾರದ ಮೇಲೆಯೆ ನಿದರ್ಶನವಾಗಿ ಹೇಳುವುದಾದರೆ ಜಮೀನಲ್ಲಿ ಹರಳನ್ನು ರೋಹಿಣಿಯಲ್ಲಿ, ರಾಗಿಯನ್ನು ಮುಖ ಮಳೆಯಲ್ಲಿಯೂ, ಮತ್ತು ಭತ್ತವನ್ನು ಆದರ್ರಾಮಳೆಯಲ್ಲಿಯು, ಬಿತ್ತುವುದು ಇವರಿಗೆ ರೂಢಿಯಾಗಿದೆ. ಕಸುಬು ನಿರ್ವಹಿಸುವಾಗ ಧರ್ಮ ದೇವತೆಗಳ ಬಗ್ಗೆ ವಿಶೇಷ ನಂಬಿಕೆಯನ್ನಿಟ್ಟುಕೊಂಡು ಕಾಲ ಕಳೆಯುತ್ತಲೆ ವಿವಿಧ ವೃತ್ತಿಯನ್ನು ನಂಬಿ ಬದುಕುತ್ತಿರುವುದು ನಿಜಕ್ಕೂ ಸಂತೋಷವಾದ ಸಂಗತಿ ಎನ್ನಬಹುದು.

**ಊಟೋಪಚಾರ**

ದೊಬಿದಾಸರು ಇತರ ಶೂದ್ರವರ್ಗದವರಂತೆ ಮಾಂಸಾಹಾರಿಗಳು ಅಂತೆಯೇ ಸಸ್ಯಹಾರಿಗಳು ಹೌದು. ಇವರು ಹಸು ಇಲಿ ಮೊಸಳೆ ಮತ್ತು ನವಿಲು ಮಾಂಸವನ್ನು ತಿನ್ನುವುದಿಲ್ಲ. ಆದರೆ ಹೆಂಡ ಸಾರಾಯಿಯನ್ನು ಕೆಲವು ಜನರು ಮಾತ್ರ ಕುಡಿಯುತ್ತಾರೆ. ಇವರಿಗಿಂತ ಮೇಲ್ವರ್ಗದವರಾದ ಬ್ರಾಹ್ಮಣರು ಲಿಂಗಾಯಿತರು ಒಕ್ಕಲಿಗರು ಮೊದಲಾದವರ ಮನೆಗಳಲ್ಲಿ ಹಬ್ಬ ಹರಿದಿನಗಳು ಮತ್ತು ವಿಶೇಷ ಸಂದರ್ಭಗಳಲ್ಲಿ ಊಟ ಮಾಡುತ್ತಾರೆ. ಇವರು ಭಿಕ್ಷೆ ಬೇಡಿ ತಂದ ವಿವಿಧ ಬಗೆಯ ಕಾಳು ಕಡ್ಡಿಗಳಿಂದ ಅಡುಗೆ ಮಾಡಿಕೊಳ್ಳುತ್ತಾರೆ. ಕೆಲವು ಸಲ ರೊಟ್ಟಿ ಅನ್ನವನ್ನು ಬೇಡಿ ತರುವುದು ಕೂಡ ಉಂಟು. ಇವರು ಕುರಿ ಕೋಳಿ ಮೀನು ಗೌಜಗ ಅಡವಿಕೋಳಿ ಇನ್ನೂ ಮುಂತಾದ ಪ್ರಾಣಿಪಕ್ಷಿಗಳನ್ನು ಮಾಂಸವನ್ನು ತಿನ್ನುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ ಶೂದ್ರವರ್ಗದವರು ಬಳಸುವ ಆಹಾರ ಪದ್ಧತಿಯಂತಯೇ ಇವರ ಊಟ ಉಪಚಾರ ವಿಧಾನವಿದೆ ಎನ್ನಬಹುದು.

**ಉಡುಗೆ**

ದೊಂಬಿದಾಸ ಸಮುದಾಯದವರು ಬಟ್ಟೆ ಧರಿಸುವುದು ಇತರ ಹಿಂದೂ ಜಾತಿಯವರ ಹಾಗೆಯೇ, ಗಂಡಸರು ಹಾಡುಗಾರಿಕೆ ಸಂದರ್ಭದಲ್ಲಿ ಮಾತ್ರ ತಲೆಗೆ ಬಣ್ಣದ ರುಮಾಲು, ನಿಲುವಂಗಿ, ಮೇಲೊಂದು ಕೋಟು ಮತ್ತು ದೋತ್ರ ತೊಟ್ಟು ಹೆಗಲ ಮೇಲೆ ಶಾಲು ಹೊದ್ದು ಜೋಳಿಗೆ ನೇತುಹಾಕಿಕೊಂಡು ಬಲಗೈಯಲ್ಲಿ ಏಕತಾರಿ ಎಡಗೈಯಲ್ಲಿ ಚಿಟಕಿ ಹಿಡಿದಿರುತ್ತಾರೆ. ಹೆಂಗಸರು ಹಿಂದೂ ಹೆಂಗಸರಂತೆಯೆ ಅಚ್ಚಗೆಂಪು ಕುಂಕುಮ ಕಾಲುಂಗರ ಗಾಜಿನ ಬಳೆಯನ್ನು ತೊಟ್ಟಿರುತ್ತಾರೆ. ಇದರರ್ಥವೇನೆಂದರೆ ಈ ಹೆಂಗಸರು ವಿವಾಹವಾಗಿರುವವರು ಎಂದರ್ಥ ದೇಹದ ಮೇಲೆ ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ.
ವಿಶೇಷವಾಗಿ ಕೈ ಭುಜ ಹಣೆ ಗಲ್ಲ ಮತ್ತು ಕೆನ್ನೆ ಮೊದಲಾದ ಭಾಗಗಳಲ್ಲಿ ಹಚ್ಚೆ ಹಾಕಿಸಿಕೊಂಡರೆ ತಮ್ಮ ಸೌಂದರ್ಯ ಹೆಚ್ಚುತ್ತದೆ ಎನ್ನುವಂತಹದ್ದು ಕೆಲವರ ಅಭಿಪ್ರಾಯ. ಶಂಖದ ತಟ್ಟೆ ತುಳಸಿ ಅರಳಿದ ಹೂವೂ ರಥ ಬಾಳೆ ಮರದ ಹಚ್ಚೆಯನ್ನು ಇವರು ಹಾಕಿಸಿಕೊಳ್ಳುತ್ತಾರೆ. ಹೆಂಗಸರು ಸೀರೆ ಉಟ್ಟು ಬಲಕ್ಕೆ ಸೆರಗು ಹಾಕಿಕೊಳ್ಳುತ್ತಾರೆ. ಗಂಡಸರು ಹಾರೋಗಚ್ಚೆ ಹಾಕಿ ಮೇಲೆ ನಿಲುವಂಗಿ ಧರಿಸುತ್ತಾರೆ. ದೇವರ ಹೆಸರಿನಲ್ಲಿ ಶಂಖ ಚಕ್ರಕಾರದ ಹಚ್ಚೆಯನ್ನು ವಿಶೇಷವಾಗಿ ಗಂಡಸರು ಹಾಕಿಸಿಕೊಳ್ಳುವ ಮೂಲಕ ತಮ್ಮ ಸೌಂದರ್ಯ ಪ್ರಿಯತೆಯನ್ನು ಹೆಚ್ಚು ಇಷ್ಟ ಪಡುತ್ತಾರೆ. ತಮ್ಮ ಉಡುಪು ವಸ್ತ್ರಾಲಂಕಾರವನ್ನು ಮಾಡಿಕೊಳ್ಳುತ್ತಾರೆ.

**ತೊಡುಗೆ (ಆಭರಣ)**

ವಿಶೇಷವಾಗಿ ಮಹಿಳೆಯರು ಆಭರಣಗಳು ತೊಡುತ್ತಾರೆ. ಮೂಗು ಘಟಿಕಾ (ಮುಗುಬಟ್ಟು) ನಲ್ಲಾಜಲು (ಕರೀಬಳೆ) ಕಮುಲು (ಓಲೆ) ಕಾಲಂದ್ಗುಲು (ಕಾಲಂದಿಗೆ) ಸುಮರೆ ಕುಪ್ಪ (ಕುಪ್ಪೆ) ಸಿಮ್ಮುನ ಮುರಾಲು (ಸಂಹನ ಮುರಾವು) ಎಂಬ ಕಿವಿಯಾಭರಣ ಕಡಗಾಲು ಒಡ್ಯಾಣಮು ಕಾಲುಂಗ್ರಾಳು ಇತ್ಯಾದಿಯನ್ನು ಬಳಸುತ್ತಾರೆ. ಹೆಂಗಸರು ಹಲ್ಲಿಗೆ ಕರುಕಾಂಯ್ ಪುಡಿ ಹಾಕಿಕೊಂಡು ಹಲ್ಲುಗಳನ್ನು ಕಪ್ಪು ಮಾಡಿಕೊಳ್ಳುತ್ತಾರೆ. ಹಣೆ ಮುಂಗೈ ರಟ್ಟೆಗಳಿಗೆ ಹಚ್ಚೆ ಹಾಕಿಸಿಕೊಂಡು ತಮ್ಮ ಮೈಸೌಂದರ್ಯವನ್ನು ಹೆಚ್ಚಿಸಿಕೊಳ್ಳುತ್ತಲೆ ತಮ್ಮ ಸೌಂದರ್ಯ ಕಲಾವಂತಿಕೆಯನ್ನು ಮೆರೆಯುತ್ತಾರೆ.

**ಹಬ್ಬಹರಿದಿನಗಳು**

ದೊಂಬಿದಾಸ ಜನಾಂಗವು ವೈಷ್ಣವ ಸಂಪ್ರದಾಯಕ್ಕೆ ಸೇರಿದವರು. ತಿರುಪತಿ ವೆಂಕಟೇಶ್ವರ ಇವರ ಕುಲದೇವರು ಜೊತೆಗೆ ಆಚಜನೇಯ ಈಶ್ವರ ಕೆಂಚರಾಯ ಮೊದಲಾದ ಗಂಡು ದೇವರುಗಳನ್ನು ಆರಾಧಿಸುತ್ತಾರೆ. ಕುಂದೂರಮ್ಮ ಮಳೆಯಮ್ಮ ಯಲ್ಲಮ್ಮ ಕಬ್ಬಾಳಮ್ಮ ಮಾರಮ್ಮ ಹುಲಿಯಮ್ಮ ಮೊದಲಾದ ಗ್ರಾಮದೇವತೆಗಳನ್ನು ಪೂಜಿಸುವ ಮೂಲಕ ತಮ್ಮ ನಿಜವಾದ ಭಕ್ತಿ ಸ್ವರೂಪವನ್ನು ತೋರಿಸುತ್ತಾರೆ. ಹೆಣ್ಣು ದೇವತೆಗಳಿಗೆ ಪ್ರಾಣಿಯನ್ನು ಬಲಿ ಕೊಡುವ ಪದ್ಧತಿ ಈ ಸಮುದಾಯದಲ್ಲಿದೆ. ಇವರು ವಿಶೇಷವಾಗಿ ಆಚರಿಸುವುದು ಪಿತೃಪಕ್ಷ ಹಬ್ಬವನ್ನು ಸತ್ತ ಹಿರಿಯರಿಗೆ ಸದ್ಗತಿ ದೊರೆಯಲಿ ಎಂಬ ಪ್ರಾರ್ಥನೆಯನ್ನು ಮಾಡುತ್ತಾರೆ. ಈ ಹಬ್ಬ ಮಾತ್ರ ಅವರಿಗೆ ತುಂಬ ವಿಶೇಷ ಇರುತ್ತದೆ. ಹಿಂದೂಗಳಂತೆಯೆ ಇವರು ಕೂಡ ದೀಪಾವಳಿ ಯುಗಾದಿ ಮಕರಸಂಕ್ರಾಂತಿ ಈ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವ ಮೂಲಕ ಯಾವುದೇ ಆಚರಣೆಯಾಗಲಿ ಅದನ್ನು ಅತಿಶ್ರದ್ಧೆ ಮತ್ತು ನಿಷ್ಠೆಯಿಂದ ಮಾಡುತ್ತಾರೆಂಬುದು ಇಲ್ಲಿ ಮುಖ್ಯವಾದ ಅಂಶವಾಗಿದೆ.

**ದೊಂಬಿದಾಸ ಜನಾಂಗದ ಸಾಮಾಜಿಕ ಸ್ಥಿತಿಗತಿ ಮತ್ತು ಇತರ ನಂಬಿಕೆಗಳು**

**ಜಾತಿ ಮತ್ತು ಉಪಜಾತಿ**

ದೊಂಬಿದಾಸ ಜನಾಂಗವನ್ನು ಮೈಸೂರು ಟ್ರೈಬ್ಸ್ ಆಂಡ್ ಕ್ಯಾಸ್ಟಸ್ ಎಂಬ ಗ್ರಂಥದಲ್ಲಿ ಬಲಿಜ ಜನಾಂಗದ ಒಂದು ಉಪಜಾತಿ ಎಂದು ಪರಿಗಣಿಸಲಾಗಿದ್ದು ಇವರನ್ನು ದಂಡಿದಾಸರು ಎಂದು ಗುರುತಿಸಲಾಗಿದೆ. ದೊಂಬಿದಾಸ ಜನಾಂಗದವರ ಹಾಗೆಯೇ ಉಪಜಾತಿಗಳು ಕೂಡ ಈ ಸಮುದಾಯದಲ್ಲಿ ಕಂಡುಬರುತ್ತವೆ. ದಂಡಿಗದಾಸರು ಹೊಲೆದಾಸರು ಹಾಡುದಾಸರು ಬೇಡದಾಸರು ಚನ್ನದಾಸರು ಗೊಲ್ಲದಾಸರು ಪಟ್ಟದಾಸರು ತೆಲಗುದಾಸರು ಗಂಡುದಾಸರು ತಿರುಮಲದಾಸರು ಗರುಡದಾಸರು ಗೋಪಾಲದಾಸರು ಶಂಖದಾಸರು ಚಕ್ರಾವಧಿದಾಸ ಮೊದಲಾದ ಪಂಗಡಗಳಿವೆ ಈ ಸಮುದಾಯದ ಅರೆ ಅಲೆಮಾರಿಗಳಾದ ಕಾರಣದಿಂದ ಇನ್ನೂ ಕೆಲವು ಒಳಪಂಗಡಗಳನ್ನು ಒಳಗೊಂಡಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಸ್ಯಾಮ್ ಕಟ್ಲೋಡು ತಿರುಮ್ಲೋಡು ಗ್ವಾದಾವಾಡು ಮೊದಲಾದವುಗಳಿವೆ. ಅದರಲ್ಲಿ ದೊಂಬಿದಾಸ ಸಮುದಾಯವು ಏಡುಪಡುತ್ಲೋಡು ಗುಂಪಿಗೆ ಸೇರಿದ ಜನಾಂಗವಾಗಿದೆ. ಒಟ್ಟಿನಲ್ಲಿ ಚೆನ್ನದಾಸರು ಸಮುದಾಯದಲ್ಲಿ ದೊಂಬಿದಾಸ ದಾಸ ಹಾಗು ದಾಸಯ್ಯ ಉಪಜಾತಿಗಳಿದ್ದು ಇವು ಚನ್ನದಾಸರ್ ಪದದ ಪರ್ಯಾಯ ಪದಗಳಾಗಿ ಬಳಕೆಯಗುತ್ತಿದೆ. ದೊಂಬಿದಾಸರು ಮತ್ತು ಚೆನ್ನದಾಸರು ಒಂದೇ ಮೂಲದವರಾಗಿದ್ದು ಆಚಾರ-ವಿಚಾರಗಳು, ಸಂಪ್ರದಾಯಗಳು, ಬೆಡಗು, ವೃತ್ತಿ, ಪೂಜಿಸುವ ದೇವರು, ಆಹಾರಪದ್ಧತಿ, ವೈವಾಹಿಕ ಸಂಬಂಧಗಳು ಒಂದೇ ಆಗಿದ್ದು ಈ ಎರಡು ಸಮುದಾಯಗಳ ನಡುವೆ ಯಾವುದೇ ವ್ಯಾತ್ಯಾಸವಿಲ್ಲವೆಂದು ಸಮಾಜಶಾಸ್ತ್ರಜ್ಞರು ತಮ್ಮ ಅಧ್ಯಯನದಿಂದ ದೃಢಪಡಿಸಿದ್ದಾರೆ ಎನ್ನಲಾಗಿದೆ.

**ಪರಾಮರ್ಶನ ಗ್ರಂಥಗಳು-**

1. ಮಾದಯ್ಯ ಮಾಕನಹಳ್ಳಿ, ಅಲೆಮಾರಿಗಳ ಸ್ಥಿತಿಗತಿಗಳು, ಪ್ರಕಾಶಕರು ಕನ್ನಡ ವಿಶ್ವವಿದ್ಯಾನಿಲಯ ಕರ್ನಾಟಕ ಸಾಹಿತ್ಯ ಅಕಾಡೆಮಿ 2007.
2. ಕುಪ್ಪೆ ನಾಗರಾಜು ದೊಂಬಿದಾಸರು, ಪ್ರಕಾಶಕರು ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ ಬೆಂಗಳೂರು 2008.
3. ಕನ್ನಡ ವಿಶ್ವಕೋಶ, ಮೈಸೂರು ವಿಶ್ವವಿದ್ಯಾನಿಲಯ,
4. ಪರಮಶಿವಯ್ಯ ಜೀ.ಶಂ. ಜನಪದ ಲೌಕಿಕರ ಕಾವ್ಯ

ಸಂಪ್ರಾದಾಯ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ ಬೆಂಗಳೂರು, 2007.
5. ಕುಪ್ಪೆ ನಾಗರಾಜು, ಏಕತಾರಿ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವರ, ಜೆ.ಸಿ ರಸ್ತೆ ಬೆಂಗಳೂರು, 2005.
6. ಗೂಗಲ್ ಡಾಟ್ ಕಾಮ್, ದೊಂಬಿದಾಸರ ಮಹಿಳಾ ಸಂಸ್ಕೃತಿ ಮಾಲಿಕೆ,
7. ಸುಭಾಷ್ ಭರಣಿ, ಧರೆಗೆ ದೊಡ್ಡವರು, ದ್ರಾವಿಡ ಪಬ್ಲಿಕೇಷನ್, ಮೈಸೂರು 2005